ಶ್ರೀ ಬಿ.ಆರ್. ಯಾವಗಲ್.—ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ೫ ವಾಹನಗಳಿದ್ದುದನ್ನು ೭ ವಾಹನಗಳಿಗೆ ವಿಸ್ತರಿಸಲಾಗಿದೆ. ಕೆಟ್ಟುಹೋಗಿರುವ ಕೊಳವೆಗಳನ್ನು ರಿಪೇರಿಮಾಡಿ ವ್ಯವಸ್ಥೆಗೊಳಿಸಲಿಕ್ಕೆ ಎಲ್ಲ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಚುಕ್ಕೆ ಪ್ರಶ್ನೆ ೭೯೮ (೧೯೧೦)

ಅಧ್ಯಕ್ಷರು —ಸದಸ್ಯರು ಗೈರುಹಾಜರಿ.

ಚುಕ್ಕೆ ಪ್ರಶ್ನೆ ೭೯೯ (೧೯೭೬)

ಸದಸ್ಯರು ಗೈರು ಹಾಜರಿ.

ಗೋಬರ್ ಅನಿಲಯಂತ್ರ ಮೇಲ್ವಿಚಾರಕರ ಕುರಿತು

೪೦೫. ಶ್ರೀ ಬಿ. ಸ್ವಾಮಿರಾವ್ (ಹೊಸಪೇಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೋಬರ್ ಗ್ಯಾಸ್ ಮೇಲ್ವಿಚಾರಕರ ನೇಮಕಾತಿಯ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರಿ ನೇಮಕಾತಿ ಕಾನೂನಿನ ಮೇರೆಗೆ ನೇಮಿಸಲಾಗಿದೆಯೇ ?

ಇ) ಸದರಿ ನೌಕರರಿಗೆ ಈಗ ಕೊಡುತ್ತಿರುವ ಸಂಬಳ ಭತ್ಯ ಎಷ್ಟು ?

ಈ) ಇಂತಹ ನೌಕರರು ರಾಜ್ಯದಲ್ಲಿ ಎಷ್ಟು ಜನರಿದ್ದಾರೆ ?

ಉ) ಇವರ ಮೇಲಿರುವ ಹತೋಟಿ ಯಾವ ಅಧಿಕಾರಿಗಳಿಗೆ ಒಳಪಟ್ಟಿದೆ?

ಊ) ಅವರಿಂದ ರಾಜ್ಯದಲ್ಲಿ ಎಷ್ಟು ಗೋಬರ್ ಗ್ಯಾಸ್ ಮತ್ತು ಒಲೆಗಳು ಆಗಿವೆ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು).—

ಅ) ರಾಜ್ಯ ಖಾದಿ ಗ್ರಾಮೋದ್ಯೋಗಮಂಡಳಿಯವರು ೧೯೭೬ರಲ್ಲಿ ಇವರುಗಳನ್ನು ನಿಗದಿತ ವೇತನದಮೇಲೆ ನೇಮಕ ಮಾಡಿಕೊಂಡಿದ್ದಾರೆ. ಮತ್ತು ಅವರ ಸೇವೆಯನ್ನು ಅದೇರೀತಿಯಲ್ಲಿ ಮುಂದುವರಿಸಿಕೊಂಡು ಬರಲಾಗುತ್ತಿದೆ.

ಆ) ಇಲ್ಲಾ

ಇ) ನಿಗದಿತ ಸಂಬಳ ಮಾಹೆಯಾನ ರೂ. ೩೫೦-೦೦
ಮತ್ತು ನಿಗದಿತ ಪ್ರವಾಸಭತ್ಯ ರೂ. ೪೦-೦೦

ಈ) ೧೩೬ ಜನರಿದ್ದಾರೆ (೧-೧-೧೯೮೬ ರಲ್ಲಿ)

ಉ) ಆಯಾ ತಾಲ್ಲೂಕು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು.

ಊ)

	ಸ್ಥಾಪಿಸಿದ ಘಟಕಗಳು
೧೯೮೨-೮೩ ರಲ್ಲಿ	೩೦೩೭ ಘಟಕಗಳು
೧೯೮೩-೮೪ ರಲ್ಲಿ	೫೭೭೪ ಘಟಕಗಳು
೧೯೮೪-೮೫ ರಲ್ಲಿ	೭೧೭೯ ಘಟಕಗಳು
೧೯೮೫-೮೬	೩೫೭೦ ಘಟಕಗಳು

(ಡಿಸೆಂಬರ್ ಅಂತ್ಯದವರೆಗೆ).

ಆಗಿರುವ ಒಲೆಗಳು

೧೯೮೪-೮೫ ರಲ್ಲಿ ೧೨೬೧೪ ಒಲೆಗಳು

೧೯೮೫-೮೬ ರಲ್ಲಿ ೨೪೮೫೫ ಒಲೆಗಳು

(ಡಿಸೆಂಬರ್ ಅಂತ್ಯದವರೆಗೆ)

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿಯವರು ಗೋಬರ್ ಗ್ಯಾಸ್ ಮೇಲ್ವಿಚಾರಕರ ನೇಮಕಾತಿಯನ್ನು ಕಾನೂನಿನ ಮೇರೆಗೆ ಮಾಡಿದ್ದಾರೆಯೇ ಎಂದು ಕೇಳಿರುವುದಕ್ಕೆ ಇಲ್ಲವೆಂದು ಹೇಳಿರುತ್ತಾರೆ. ಹಾಗಿದ್ದಲ್ಲಿ ನೇಮಕಾತಿಯಾಗಿರುವವರ ಗತಿ ಏನು ? ಅವರ ಸಂಬಳ ಭತ್ಯ ಯಾವ ರೀತಿ, ಯಾರು ಕೊಡತಕ್ಕಂಥದ್ದು ? ಮತ್ತೆ ಅವರೂ ಕೂಡ ಮದುವೆ ಮಾಡಿಕೊಂಡು ಅವರಿಗೆ ಹೆಂಡತಿ ಮಕ್ಕಳಿರುವುದರಿಂದ ಅವರ ಜೀವನ ವ್ಯವಸ್ಥೆ ಯಾವ ರೀತಿ ನಡೆಯಬೇಕೆಂದು ಕೇಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ ಅವರ ನೇಮಕಾತಿಯನ್ನು ಖಾದಿ ಗ್ರಾಮೋದ್ಯೋಗ ಮಂಡಳಿಯವರು ೧೯೮೫ನೇ ಇಸವಿಯಲ್ಲಿಯೇ ಮಾಡಿದ್ದು, ೧೯೮೫ನೇ ಇಸವಿಯಲ್ಲಿ ಸರ್ಕಾರಕ್ಕೆ ವಹಿಸಿಕೊಟ್ಟಿರುತ್ತಾರೆ. ಈ ಯೋಜನೆಯು ಕೇಂದ್ರ ಸರ್ಕಾರದ ಅಡಿಯಲ್ಲಿ ಬರುವುದರಿಂದ ಕೇಂದ್ರ ಸರ್ಕಾರಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಇವರುಗಳ ಸಂಬಳವನ್ನು ಕೊಡುವಂತೆ ಕೇಳಿಕೊಂಡಿರುತ್ತೇವೆ. ಇನ್ನೂ ಇದರ ಬಗ್ಗೆ ಒಪ್ಪಿಗೆಯನ್ನು ಕೊಟ್ಟಿಲ್ಲ. ಜಿಲ್ಲಾ ಪರಿಷತ್ತು ಬಂದಮೇಲೆ ಇವರುಗಳಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸವಲತ್ತುಗಳನ್ನು ಕೊಡಬೇಕೆಂಬ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಆದನ್ನು ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಇದು ಸರ್ಕಾರದ ನೇಮಕಾತಿಯಾದ್ದರಿಂದ, ನೇರವಾಗಿ ರಾಜ್ಯ ಸರ್ಕಾರದ ಹೊಣೆಯಲ್ಲಿ ಬರುತ್ತದೆ. ಆದ್ದರಿಂದ ಯಾವಾಗ ಅವರುಗಳ ಸಂಬಳವನ್ನು ಹೆಚ್ಚು ಮಾಡುತ್ತೀರೆಂದು ಕೇಳುತ್ತೇವೆ.

ಶ್ರೀ ಬಿ.ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೇಳಿದ್ದೇನೆ. ಕಾಲಮಿತಿಯನ್ನು ಹೇಳುವುದಕ್ಕೆ ಆಗುವುದಿಲ್ಲ. ಜಿಲ್ಲಾ ಪರಿಷತ್ ವ್ಯವಸ್ಥೆ ಬರುತ್ತದೆ. ಆಗ ನಿಶ್ಚಯವಾಗಿಯೂ ಈ ವಿಚಾರವನ್ನು ಪರಿಶೀಲನೆಮಾಡಿ ಮಾಡುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು.— ಚುಕ್ಕೆ ಪ್ರಶ್ನೆ ೮೦೧ (೧೮೭)

ಸದಸ್ಯರು ಗೈರು ಹಾಜರಿ.

ಉರ್ದು ಶಾಲೆಗಳಿಗಾಗಿ ಪ್ರತ್ಯೇಕ ನಿರ್ದೇಶನಾಲಯ ಸ್ಥಾಪಿಸುವ ಬಗ್ಗೆ

೧೨೨೩. ಶ್ರೀ ಆರ್. ರೋಷನ್ ಬೇಗ್ (ಶಿವಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಉರ್ದು ಶಾಲೆಗಳಿಗಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪಿಸುವುದಾಗಿ ಶಿಕ್ಷಣ ಸಚಿವರು ಹೇಳಿಕೆ ನೀಡಿರುವುದು ನಿಜವೆ?

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಈ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ಈ ಬಗ್ಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಪ್ರಥಮ ಹಂತವಾಗಿ ಉಪನಿರ್ದೇಶಕರ ಹುದ್ದೆಯನ್ನು ಸೃಷ್ಟಿಸಿದ್ದು, ಉಳಿದ ಪೂರ್ವಭಾವಿ ಹುದ್ದೆ ಮತ್ತು ಸೌಲಭ್ಯಗಳನ್ನು ಹಂತ ಹಂತವಾಗಿ ಒದಗಿಸಲಾಗುವುದು.